**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 480ಕ್ಕೆ ಉತ್ತರಗಳು:** ದಿನಾಂಕ- 10-12-2020

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಅನುದಾನಿತ ಶಾಲಾ ಕಾಲೇಜುಗಳಲ್ಲಿ 2015ನೇ ಸಾಲಿನವರೆಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿಯಂತೆ ಶಿಕ್ಷಣ ಇಲಾಖೆಯಿಂದ ಆರ್ಥಿಕ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು: (ಪ್ರಾಥಮಿಕ, ಪ್ರೌಢ, ಪದವಿ ಪೂರ್ವ, ಪದವಿ ಕಾಲೇಜುಗಳ ವಿವರ ನೀಡುವುದು) | ವಿವರಗಳಿಗೆ ಅನುಬಂಧ-1 ಮತ್ತು 2ನ್ನು ಲಗತ್ತಿಸಿದೆ. |
| (ಆ) | ಸದರಿ ಕಡತಗಳಿಗೆ ಆರ್ಥಿಕ ಇಲಾಖೆ ಕೋವಿಡ್-19ರ ಆರ್ಥಿಕ ಮಿತವ್ಯಯ ಅಡಿ ಅನುಮೋದನೆಗೆ ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯದಲ್ಲಿ ತೀವ್ರ ಆರ್ಥಿಕ ಸಂಕಷ್ಟ ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ಸುತ್ತೋಲೆ ಸಂಖ್ಯೆ:ಆಇ 157 ವೆಚ್ಚ-8 2020. ದಿನಾಂಕ:10.06.2020 ರನ್ವಯ ಆರ್ಥಿಕ ಮಿತವ್ಯಯ ಆದೇಶ ಹೊರಡಿಸಲಾಗಿದೆ. |
| (ಇ) | ಇದರಿಂದಾಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಅನುದಾನದ ನಿರೀಕ್ಷೆಯಲ್ಲಿರುವ ಬೋಧಕರಿಗೆ ಮತ್ತು ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ರಾಜಸ್ವ ಸಂಗ್ರಹಣೆಯಲ್ಲಿ ತೀವ್ರ ಕುಸಿತ ಉಂಟಾಗಿರುವುದರಿಂದ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿರುತ್ತದೆ. ಇದಕ್ಕಾಗಿ ಸರ್ಕಾರದ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವ ಅವಶ್ಯಕತೆ ಇರುವುದರಿಂದ ಈ ಉದ್ದೇಶಕ್ಕೆ ಕೈಗೊಂಡಿರುವ ಕ್ರಮಗಳಲ್ಲಿ ನೇಮಕಾತಿಗಳನ್ನು ತಡೆಹಿಡಿದಿರುವುದು ಸೇರಿದೆ. |
| (ಈ) | ಹಾಗಿದ್ದಲ್ಲಿ, ಸದರಿ ಮಿತವ್ಯಯವನ್ನು ಸಡಿಲಿಸಿ, ಶಿಕ್ಷಣ ಇಲಾಖೆಯಿಂದ ಬರುವ ಎಲ್ಲಾ ಪ್ರಸ್ತಾವನೆಗಳಿಗೂ ಯಾವ ಕಾಲಮಿತಿಯಲ್ಲಿ ಅನುಮೋದನೆ ನೀಡಲಾಗುವುದು? | ಮೇಲಿನ ಉತ್ತರದಿಂದಾಗಿ ಕಾಲಮಿತಿ ನಿಗದಿಪಡಿಸಲು ಸಾಧ್ಯವಿರುವುದಿಲ್ಲ. |

**ಸಂಖ್ಯೆ:ಆಇ 246 ವೆಚ್ಚ-8/2020**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಅನುಬಂಧ-1

## ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳ ವಿವರಗಳು

| SL NO | FD Number | ED Number | Subject | Remarks |
|---|---|---|---|---|
| 1 | FD 128 EXP8 2020 | FD 294 UPC 2019 | ಶ್ರೀ.ಹಂಪಿ ವಿರೂಪಾಕ್ಷೇಶ್ವರಸ್ವಾಮಿ ಪದವಿ ಮಹಾವಿದ್ಯಾಲಯ, ಹೊಸಪೇಟೆ, ಇಲ್ಲಿನ ದ್ವಿ.ದ.ಸ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ. | |
| 2 | FD 225 EXP8 2020 | ED 73 TPE 2020 | ಗೋಮಟೇಶ್ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ ಈ ಸಂಸ್ಥೆಯಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡುವ ಬಗ್ಗೆ. | |
| 3 | FD 218 EXP8 2020 | ED 14 UPC 2019 | ಬಸವೇಶ್ವರ ವಾಣಿಜ್ಯ, ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ | |
| 4 | FD 212 EXP8 2020 | ED 87 UPC 2020 | ಕರ್ನಾಟಕ ಲಿಂಗಾಯುತ ಶಿಕ್ಷಣ ಸಂಸ್ಥೆ, ಬೆಳಗಾವಿ, ಇದರ ಆಡಳಿತ ಮಂಡಳಿ ವ್ಯಾಪ್ತಿಗೊಳಪಡುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ. | |
| 5 | FD 211 EXP8 2020 | ED 332 UPC 2019 | ವಿವೇಕಾನಂದ ಮಹಾವಿದ್ಯಾಲಯ ಪುತ್ತೂರು, ಇವರ ವ್ಯಾಪ್ತಿಗೊಳಪಡುವ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಪುತ್ತೂರು, ಇಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. | |
| 6 | FD 210 EXP8 2020 | ED 324 UPC 2019 | ಶ್ರೀ ಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಶ್ರೀ ಸಿದ್ದಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು ಇಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹಾಗೂ ಗ್ರಂಥಪಾಲಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು. | ಆರ್ಥಿಕ ಮಿತವ್ಯಯದ ಸುತ್ತೋಲೆ ಸಂಖ್ಯೆ:ಆಇ 157 ವೆಚ್ಚ-8 2020, ದಿನಾಂಕ:10.06.2020 ರ ಕಡೆ ಆಡಳಿತ ಇಲಾಖೆಯ ಗಮನ ಸೆಳೆದು ಕಡತಗಳನ್ನು ಹಿಂದಿರುಗಿಸಿದೆ. |
| 7 | FD 151 EXP8 2020 | ED 74 UPC 2020 | ರೂರಲ್ ಕಾಲೇಜು, ಕನಕಪುರ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ | |
| 8 | FD 168 EXP8 2020 | ED 166 UNE 2019 | ಶ್ರೀ ದಿಡ್ಡಿ ಆಂಜನೇಯಸ್ವಾಮಿ ಸಂಸ್ಕೃತ ಪಾಠಶಾಲೆ, ಹೊನ್ನಾಳಿ, ದಾವಣಗೆರೆ ಇಲ್ಲಿ ವಯೋನಿವೃತ್ತಿಯಿಂದ ಖಾಲಿಯಾದ ಸಂಸ್ಕೃತ ಶಿಕ್ಷಕರ ಹುದ್ದೆಯನ್ನು ಅನುದಾನ ಸಹಿತವಾಗಿ ನೇಮಕಾತಿ ಅನುಮೋದನೆ ನೀಡುವ ಬಗ್ಗೆ. | |
| 9 | FD 168 EXP8 2020 | ED 167 UNE 2019 | ಶ್ರೀಮದ್ ರಂಭಾಪುರಿ ಸಂಸ್ಕೃತ ಪಾಠಶಾಲೆ, ತುಮಕೂರು ಜಿಲ್ಲೆ ಇಲ್ಲಿ ವಯೋನಿವೃತ್ತಿಯಿಂದ ಖಾಲಿಯಾದ ಸಂಸ್ಕೃತ ಶಿಕ್ಷಕರ ಹುದ್ದೆಯನ್ನು ಅನುದಾನ ಸಹಿತವಾಗಿ ನೇಮಕಾತಿ ಅನುಮೋದನೆ ನೀಡುವ ಬಗ್ಗೆ. | |
| 10 | FD 168 EXP8 2020 | ED 165 UNE 2019 | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಪಾಠಶಾಲೆ, ಶಿರಸಿ ತಾ., ಉ.ಕ. ಜಿಲ್ಲೆ ಪಾಠಶಾಲೆಯಲ್ಲಿ ವಯೋನಿವೃತ್ತಿಯಿಂದ ಖಾಲಿಯಾದ ಒಂದು ಸಂಸ್ಕೃತ ಸಹಶಿಕ್ಷಕರ ಹುದ್ದೆಯನ್ನು ನೇಮಕಾತಿ ಅನುಮೋದನೆ ನೀಡುವ ಬಗ್ಗೆ. | |
| 11 | FD 168 EXP8 2020 | ED 196 UNE 2019 | ಶ್ರೀ ಶಿವಾನುಭ ತತ್ವ ಪ್ರಚಾರ ಸಮಿತಿಯ ಸಂ.ಪಾ.ಶಾ., ಹಿರೇಕೆರೂರು, ಹಾವೇರಿ ಇಲ್ಲಿ ವಯೋನಿವೃತ್ತಿಯಿಂದ ಖಾಲಿಯಾದ ಒಂದು ಸ.ಶಿ.ರ ಹುದ್ದೆಯನ್ನು ಭರ್ತಿ ಮಾಡಲು ಅನುದಾನ ಸಹಿತವಾಗಿ ಅನುಮತಿ ನೀಡುವ ಬಗ್ಗೆ. | |
| 12 | FD 168 EXP8 2020 | ED 71 UNE 2019 | ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ಹಿರೇಕಲ್ಮಠ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ ಈ ಪಾಠಶಾಲೆಯಲ್ಲಿ ಸ್ವಯಂ ನಿವೃತ್ತಿಯಿಂದ ಖಾಲಿಯಾದ ಸಂಸ್ಕೃತ ಶಿಕ್ಷಕ ಹುದ್ದೆಗೆ ಭರ್ತಿ ಮಾಡಿಕೊಳ್ಳಲು ಶ್ರೀಮತಿ ಪ್ರತಿಮಾ. ಕೆ.ಎನ್. ಇವರನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ | |
| 13 | FD 168 EXP8 2020 | ED 197 UNE 2019 | ಸುಜಾತ ವಿದ್ಯಾಸಂಸ್ಥೆ, ಬೆಂಗಳೂರು – ಸಂಸ್ಕೃತ ಪಾಠಶಾಲೆಯಲ್ಲಿ ವಯೋನಿವೃತ್ತಿಯಿಂದ ಖಾಲಿಯಾದ ಒಂದು ಸ.ಶಿ ಹುದ್ದೆಯನ್ನು ಭರ್ತಿ ಮಾಡಲು ಅನುದಾನ ಸಹಿತವಾಗಿ ಅನುಮತಿ ನೀಡುವ ಬಗ್ಗೆ. | |

| SL NO | FD Number | ED Number | Subject | Remarks |
| --- | --- | --- | --- | --- |
| 14 | FD 168 EXP8 2020 | ED 30 UNE 2020 | ಶ್ರೀ ಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಪಾಠಶಾಲೆ, ತುಮಕೂರು ಇಲ್ಲಿ ವಯೋನಿವೃತ್ತಿಯಿಂದ ಖಾಲಿಯಾದ ಸಂಸ್ಕೃತ ಶಿಕ್ಷಕರ ಹುದ್ದೆಯನ್ನು ಅನುದಾನ ಸಹಿತವಾಗಿ ನೇಮಕಾತಿ ಅನುಮೋದನೆ ನೀಡುವ ಬಗ್ಗೆ. | ಆರ್ಥಿಕ ಮಿತವ್ಯಯದ ಸುತ್ತೋಲೆ ಸಂಖ್ಯೆ:ಆಇ 157 ವೆಚ್ಚ-8 2020, ದಿನಾಂಕ:10.06.2020 ರ ಕಡೆ ಆಡಳಿತ ಇಲಾಖೆಯ ಗಮನ ಸೆಳೆದು ಕಡತಗಳನ್ನು ಹಿಂದಿರುಗಿಸಿದೆ. |
| 15 | FD 168 EXP8 2020 | ED 100 UNE 2020 | ಶ್ರೀ ಕೊಂಗಾಡಿಯಪ್ಪ ಸಂಸ್ಕೃತ ಪಾಠಶಾಲೆ, ದೊಡ್ಡಬಳ್ಳಾಪುರ – ಇಲ್ಲಿ ಖಾಲಿಯಾದ ಎರಡು ಸಂಸ್ಕೃತ ಸಹಶಿಕ್ಷಕರ ಹುದ್ದೆಗಳ ನೇಮಕಾತಿಯನ್ನು ವೇತನ ಸಹಿತವಾಗಿ ಅನುಮೋದಿಸುವ ಬಗ್ಗೆ. | |
| 16 | FD 168 EXP8 2020 | ED 101 UNE 2020 | ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ ಇವರ ವತಿಯಿಂದ ನಡೆಯುತ್ತಿರುವ ಮೂರು ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇರುವ ಒಟ್ಟು ನಾಲ್ಕು ಸಹಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುದಾನಸಹಿತವಾಗಿ ಅನುಮತಿ ನೀಡುವ ಬಗ್ಗೆ. | |
| 17 | FD 168 EXP8 2020 | ED 90 UNE 2020 | ಶ್ರೀ ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಶ್ರೀ ಪವಾಡ ಬಸವಣ್ಣದೇವರಮಠ, ನೆಲಮಂಗಲ ತಾ, ಬೆಂ(ಗ್ರಾ)ಜಿಲ್ಲೆ – ಈ ಪಾಠಶಾಲೆಯಲ್ಲಿ ಸ್ವಯಂನಿವೃತ್ತಿಯಿಂದ ಖಾಲಿಯಾದ ಒಂದು ಸಂಸ್ಕೃತ ಸಹ ಶಿಕ್ಷಕರ ಹುದ್ದೆಯನ್ನು ಭರ್ತಿಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ | |
| 18 | FD 191 EXP8 2020 | ED 84 UPC 2020 | ಶ್ರೀ.ಚಂದ್ರಶೇಖರ್, ಮೈಸೂರು, ಇವರು 2005ರಡಿ ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ಕೋರಿರುವ ಕುರಿತು.(ಪ್ರಯೋಗಾಲಯ ಸಹಾಯಕರು ವೇತನಾನುದಾನಕ್ಕೆ ಕುರಿತು). | |
| 19 | FD 201 EXP8 2020 | ED 08 KVV 2020 | ಡಿ ಗ್ರೂಪ್ ಮತ್ತು ವಾಹನ ಚಾಲಕರ ರಿಕ್ತ ಹುದ್ದೆಗಲ ಎದುರಾಗಿ ತಾತ್ಕಾಲಿಕ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಹಾಗೂ ವೇತನಾನುದಾನ ಬಿಡುಗಡೆ ಕುರಿತು | |

## ಅನುಬಂಧ-2

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳ ವಿವರಗಳು

| SL NO | FD Number | ED Number | Subject | Remarks |
|---|---|---|---|---|
| 1 | ಆಇ 371 ವೆಚ್ಚ-8/2020 | ಇಪಿ 199 ಎಸ್‌ಇಎಸ್ 2020 | ಆರ್ಥಿಕ ಇಲಾಖೆಯಿಂದ ಹೊರಡಿಸಿರುವ ಸುತ್ತೋಲೆಗೆ ವಿನಾಯಿತಿ ಕೋರಿರುವ ಬಗ್ಗೆ. | ಮಾನ್ಯ ಮುಂತ್ರಿಯವರ ಅನುಮೋದನೆ ಪಡೆದು ಆರ್ಥಿಕ ಮಿತವ್ಯಯದ ಸುತ್ತೋಲೆ ಸಂಖ್ಯೆ:ಆಇ 157 ವೆಚ್ಚ-8 2020. ದಿನಾಂಕ:10.06.2020 ರ ಕಡೆ ಆಡಳಿತ ಇಲಾಖೆಯ ಗಮನ ಸೆಳೆದು ಕಡತಗಳನ್ನು ಹಿಂದಿರುಗಿಸಿದೆ. |
| 2 | ಆಇ 371 ವೆಚ್ಚ-8/2020 | ಇಪಿ 183 ಪಿಎಂಸಿ 2020 | ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. | |
| 3 | ಆಇ 353 ವೆಚ್ಚ-8/2020 | ಇಪಿ 61 ಟಿಪಿಯು 2020 | ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. | |